**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.776/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಪ್ರಕಾಶ ಹರಿಜನ | ಪಿಡಬ್ಲ್ಯೂ | 8 |
| ತಂದೇ:ಗಂಡನ ಹೆಸರು | : | ಹನುಮಂತಪ್ಪ | ಸಿಡಬ್ಲ್ಯೂ | 6 |
| ವಯಸ್ಸು | : | 41 ವರ್ಷ | | |
| ಉದ್ಯೋಗ | : | ಕೂಲಿ ಕೆಲಸ | | |
| ವಾಸ ಸ್ಥಳ | : | ಮಾರನಬೀಡ | | |

**ದಿನಾಂಕ: 19.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನನಗೆ ಚಾಸಾ–1 ರವರು ಗೊತ್ತು. ಮೃತ ಬಸವರಾಜ ಹರ್ಲಾಪುರ ರವರು ಗೊತ್ತು. ಚಾಸಾ–7 ನನ್ನ ಮಗ. 2015 ನೇ ಸಾಲಿನಂದು ನನ್ನ ಮಗನಾದ ಚಾಸಾ–7 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗ ಬಸವರಾಜ ಹರ್ಲಾಪುರ ರವರು ನಾನು ಬರುತ್ತೇನೆಂದು ನನ್ನ ಬೈಕ್ ನಲ್ಲಿ ಕುಳಿತುಕೊಂಡರು. ಆ ಸಂದರ್ಭದಲ್ಲಿ ನಮ್ಮ ಬೈಕ್ ಹೊಂಬಳಿ ಗ್ರಾಮ ತಲುಪಿದಾಗ ಎದುರುಗಡೆಯಿಂದ ಆರೋಪಿ ಬೈಕ್ ನಲ್ಲಿ ವೇಗವಾಗಿ ಬಂದು ನಮ್ಮ ಬೈಕ್ ಗೆ ಡಿಕ್ಕಿ ಪಡಿಸಿದನು. ಇದರಿಂದ ನಾನು ಕೆಳಗಡೆ ಬಿದ್ದು ಪ್ರಜ್ಞೆ ತಪ್ಪಿತು. ಮೊದಲು ನನ್ನನ್ನು ಹಾನಗಲ್ ಆಸ್ಪತ್ರೆ ಗೆಗೆ ಸೇರಿಸಿ ಆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆ ಗೆ ಕರೆದುಕೊಂಡು ಹೋದರು. ಇದರಿಂದ ನನ್ನ ತಲೆಗೆ ಮತ್ತು ಬೆರಳಿಗೆ ಪೆಟ್ಟಾಗಿತ್ತು. ನನ್ನ ಮಗನ ತಲೆಗೂ ಸಹ ಪೆಟ್ಟಾಗಿತ್ತು. ಅದೇ ರೀತಿ ಬಸವರಾಜ ಹರ್ಲಾಪುರರವರಿಗೆ ಕಾಲಿಗೆ ಪೆಟ್ಟಾಗಿತ್ತು. ಆ ನಂತರ ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ನನ್ನ ಬೈಕ್ ನ ನಂಬರ ನನಗೆ ಗೊತ್ತಿಲ್ಲ. ಅದೇ ರೀತಿ ನನಗೆ ಡಿಕ್ಕಿ ಪಡಿಸಿದ ಬೈಕ್ ನಂಬರ ಸಹ

ಗೊತ್ತಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ಈ ಬಗ್ಗೆ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ದಿನಾಂಕ 23.11.2015 ರಂದು ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೇನು ಎಂದರೆ ಸರಿ. ನಾನು ಹೋಗುತ್ತಿದ್ದ ಬೈಕ್ ನಂಬರ ಕೆ ಎ 27/ಈಈ-5882 ಆಗಿತ್ತು ಎಂದರೆ ಸರಿ. ಆ ದಿನ ಎದುರುಗಡೆಯಿಂದ ಬಂದು ಡಿಕ್ಕಿ ಪಡಿಸಿದ ಮೋಟರ್ ಸೈಕಲ್ ನಂಬರ ಕೆ ಎ 27-ಎಸ್/1822 ಎಂದು ಆ ನಂತರ ಗೊತ್ತಾಯಿ ಎಂದರೆ ಸರಿ. ಆ ಬೈಕ್ ನಲ್ಲಿ ನಿಂಗಪ್ಪ ಬಸ್ತಿ ಎಂಬುವವರು ಇದ್ದರು ಎಂಬುದು ನನಗೆ ಗೊತ್ತಾಯಿತು ಎಂದರೆ ಸರಿ. ಈ ಅಪಘಾತದಿಂದ ಬಸವರಾಜ ಹರ್ಲಾಪುರ ರವರು ದಿನಾಂಕ 29.11.20215 ರಂದು ಮೃತ ಪಟ್ಟರು ಎಂಬ ವಿಚಾರ ಗೊತ್ತಾಯಿತು ಎಂದರೆ ಸರಿ. ಈ ಅಪಘಾತವು ಆ ದಿನ ಸಂಜೆ 06.30 ಗಂಟೆ ಆಯಿತು ಎಂಬುದು ನನಗೆ ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ಪೋಲಿಸರು ನನ್ನ ಹೇಳಿಕೆ ಪಡೆದರು ಎಂರೆ ಸರಿಯಲ್ಲ. ಆ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು.

**:ಪಾಟೀ ಸವಾಲು: ಆರೋಪಿ ಪರ ಶ್ರೀ.ಎಸ್ ಜಿ ಟಿ ವಕೀಲರಿಂದ:**

ನಾನು 9 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಗಾಡಿ ನಂಬರ ಮತ್ತು ಅಂಕಿ ಸಂಖ್ಯೆಗಳು ಗೊತ್ತಾಗುತ್ತವೆ. ಬಸವರಾಜ ಹರ್ಲಾಪುರ ರವರು ಮಾರನಬೀಡ ಗ್ರಾಮದವರು. ಆ ದಿನ ಬಸವರಾಜ ಹರ್ಲಾಪುರ ರವರು ಬೆಳಗಾಲಪೇಟೆಗೆ ಹೊಟಿದ್ದರು. ಆತ ನಮ್ಮ ಜೊತೆಯಲ್ಲೇ ನಮ್ಮ ಬೈಕ್ ಮೇಲೆ ಕುಳಿತಿದ್ದರು. ಆದಿನ ಬೈಕ್ ನ್ನು ನಾನೇ ಚಲಾಯಿಸುತ್ತಿದ್ದೇನು. ಆ ಬೈಕ್ ಚಲಾಯಿಸಲು ಚಾಲನಾ ಪರವಾನಿಗೆ ಇರುವುದಿಲ್ಲ. ನಾನು ಚಲಾಯಿಸುತ್ತಿದ್ದ ಬೆಎಕ್ ನನ್ನ ತಮ್ಮನ ಬೈಕ್ ಆಗಿರುತ್ತದೆ. ನನಗೆ ಅಪಘಾತ ಪಡಿಸಿದ ಬೈಕ್ ನಂಬರ ನನಗೆ ಗೊತ್ತಿಲ್ಲ. ನನಗೆ ಅಪಘಾತ ಪಡಿಸಿದ ಬೈಕ್ ನಲ್ಲಿ ಎಷ್ಟು ಜನರು ಇದ್ದರು ಎಂಬುದು ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳ ಬಿಂಗಾಪುರದಿಂದ 3 ಕಿ ಮಿ

ದೂರದಲ್ಲಿದೆ. ಅದೇ ರೀತಿ ಹೊಂಬಳಿಯಿಂದ ಅರ್ಧ ಕಿ ಮಿ ದೂರದಲ್ಲಿದೆ. ಅಪಘಾತವಾದ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ಹೊಂಬಳಿ ಪಶ್ಚಿಮಕ್ಕೆ ಬಿಂಗಾಪುರ ಉತ್ತರಕ್ಕೆ ವ್ಯವಸಾಯದ ಜಮೀನುಗಳು ಮತ್ತು ದಕ್ಷಿಣಕ್ಕೆ ಹೊಲಗಳು.ಆ ಜಮೀನುಗಳು ಯಾರ ಹೆಸರಿನಲ್ಲಿವೆ ಎಂಬುದು ನನಗೆ ಗೊತ್ತಿಲ್ಲ. ವಿಜಯಾ ಬೈಲವಾಳ ರವರ ಜಮೀನು ರಸ್ತೆಗೆ ಹೊಂದಿಕೊಂಡು ಇದೆ. ಆ ಹೊಲ ರಸ್ತೆಯ ಪಶ್ಚಿಮಕ್ಕೆ ದಿಕ್ಕಿಗೆ ಇದೆ. ಈ ಅಪಘಾತದಿಂದ ನನ್ನ ಬಲಗೈ ಗೆ ಮತ್ತು ಎಡಭುಜಕ್ಕೆ ಮತ್ತು ತಲೆಗೆ ಪೆಟ್ಟಾಯಿತು. ಆ ದಿನ ಬೈಕ್ ಸವಾರ ಬೆಳಗಾಲಪೇಟೆ ಕಡೆಯಿಂದ ಬರುತ್ತಿದ್ದನು. ಆತ ತನ್ನ ರಸ್ತೆಯ ಕಡೆಗಾದಂತೆ ಹೋಗುತ್ತಿದ್ದನು ಎಂದರೆ ಸರಿಯಲ್ಲ. ನಾನು ರಸ್ತೆಯ ಎಡಭಾಗದಲ್ಲಿಯೇ ಹೋಗುತ್ತಿದ್ದೆನು. ಆರೋಪಿಯು ಸಹ ರಸ್ತೆಯ ಎಡಭಾಗದಲ್ಲಿ ವೇಗವಾಗಿ ಬರುತ್ತಿದ್ದನು. ಆ ಸ್ಥಳದಲ್ಲಿ ರಸ್ತೆ ತಗ್ಗಿನಿಂದ ಕೂಡಿದ ಕಾರಣ ಆರೋಪಿ ನಿಧಾನವಾಗಿಯೇ ಬರುತ್ತಿದ್ದನು ಎಂದರೆ ಸರಿಯಲ್ಲ. ಈ ಅಪಘಾತದಿಂದ ಚಾಸಾ-1 ರವರ ತಲೆಗೆ ಮತ್ತು ಮೈ ಕೈಗೆ ಗಾಯಗಳಾಗಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಜೆ 06.30 ಗಂಟೆ ಸಮಯದಲ್ಲಿ ಕತ್ತಲು ಆಗಿರಲಿಲ್ಲ ಎಂದರೆ ಸರಿ. ಆ ದಿನ ಆರೋಪಿ ತನ್ನ ರಸ್ತೆ ಕಡೆಗಾದಂತೆ ಹೋಗುತ್ತಿದ್ದರು ಸಹ ನಾವುಗಳೇ ಹೋಗಿ ಡಿಕ್ಕಿ ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವಾದ ಬೇರೆ ಯಾರು ಸಹ ಆ ಸ್ಥಳದಲ್ಲಿ ಇರಲಿಲ್ಲ.ಅಪಘಾತದ ಸ್ಥಳ ಆ ಎರಡು ಊರುಗಳಿಂದ ಸುಮಾರು ಎರಡೂವರೆ ಕಿ ಮಿ ದೂರದಲ್ಲಿ ಇದೆ ಎಂದರೆ ಸರಿ. ಈ ಬಗ್ಗೆ ನಾನು ಪೋಲಿಸರು ಮುಂದೆ ಹೇಳಿಕೆ ನೀಡಿರುವುದಿಲ್ಲ. ಈ ಅಪಘಾತಕ್ಕೂ ನನಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ